## ಸಿಗರೇಟ್ ಪ್ಯಾಕ್ ನಾಯಿಮರಿ



ಖಾಲಿಯಾದ ಸಿಗರೇಟು ಪ್ಯಾಕ್‌ಗಳನ್ನು ಎಸೆಯುವ ಬದಲು ಅದರಲ್ಲಿ ನಾಯಿಮರಿ ಬೊಂಬೆ ತಯಾರಿಸಬಹುದು. ಹಿಂದೆಲ್ಲ ಗೃಹಿಣಿಯರು, ಯುವತಿಯರು ಮನೆಯಲ್ಲಿ ಬಿಡುವಿದ್ದಾಗ ಈ ಖಾಲಿ ಸಿಗರೇಟ್ ಪ್ಯಾಕ್‌ಗಳನ್ನು ಸೇರಿಸಿ ಕಲಾಕೃತಿ ತಯಾರಿಸಿ ಮನೆಯ ಶೋಕೇಸ್‌ನಲ್ಲಿ ಪ್ರದರ್ಶಿಸುತ್ತಿದ್ದರು. ಚಿತ್ರದಲ್ಲಿರುವ ಈ ಕಲಾಕೃತಿಯನ್ನು ಮೂಲತಃ ನರಸಿಂಹರಾಜಪುರದವರಾದ ಸಾಗರದ ಲೀಲಮ್ಮನವರು ಮಾಡಿದ್ದಾರೆ.

**ಎಸ್.ಎನ್. ಮಹಾಬಲರಾವ್,**
**ನರಸಿಂಹರಾಜಪುರ**



## ವಿಶೇಷ ವಾದ್ಯ ಬಾಂಕಿ

ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಶಾನೆಗೆರೆಯ ಟಿ. ಜಿ. ಮಂಜುದಾಸಪ್ಪ ವರ್ಷದಲ್ಲಿ ನಾಲ್ಕು ತಿಂಗಳು ತಮ್ಮ ತೆಂಗಿನ ತೋಟದಲ್ಲಿ ದುಡಿಯುತ್ತಾರೆ. ಉಳಿದ ಎಂಟು ತಿಂಗಳು ಕರ್ನಾಟಕದಾದ್ಯಂತ ಮನೆ ಮನೆಗಳಿಗೆ ಹೋಗಿ ತಿರುಪತಿ ವೆಂಕಟರಮಣನ ನಾಮಸ್ಮರಣೆ ಮಾಡಿ ಭಿಕ್ಷೆ ಹಾಕಿಸಿಕೊಳ್ಳುತ್ತಾರೆ.

ಕೊರಳಲ್ಲಿ ತುಳಸೀಮಾಲೆ, ಹಣೆಯ ತುಂಬ ನಾಮ, ತಲೆಯ ಮೇಲೆ ಪೇಟ, ಕೈನಲ್ಲಿ ಗರುಡಗಂಬ ಜಾಗಟೆ, ಕಂಕುಳಲ್ಲಿ ನೇತುಹಾಕಿಕೊಂಡ ಶಂಖ ಮತ್ತು ಬವನಾಶ (ಭಿಕ್ಷಾಪಾತ್ರೆ) ಇವರ ವೇಷಭೂಷಣಗಳು. ತಿರುಪತಿಯಿಂದ ಎರಡು ಸಾವಿರ ಕೊಟ್ಟು ತಂದ 'ಬಾಂಕಿ' ಇವರ ವೈಶಿಷ್ಟ್ಯ. ಊದಿದಾಗ ಆನೆ ಘೀಳಿಟ್ಟಂತೆ ಭಾಸವಾಗುವ ಈ ಬಾಂಕಿ ಅವರಷ್ಟೇ ದೀರ್ಘವಾಗಿದ್ದರೂ ಅಭಿಮಾನದಿಂದ ಅದನ್ನು ಹೊತ್ತುಕೊಂಡು ತಿರುಗಾಡುವ ಅವರನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ.

**ಚಿತ್ರ ಬರಹ : ಡಾ. ವೇಣುಗೋಪಾಲ ಶರ್ಮಾ,**
**ಗುರುವಾಯನಕೆರೆ**

## ವಿದ್ಯುತ್ ಕಂಬಕ್ಕೆ ಸೇಫ್ಟಿ ಸ್ವಿಚ್

ಮಳೆಗಾಲದಲ್ಲಿ ವಿದ್ಯುತ್ ಕಂಬದಲ್ಲಿನ ಸ್ವಿಚ್ ಮಳೆಯಿಂದ ತೇವವಾದರೆ ವಿದ್ಯುತ್ ಪ್ರವಹಿಸಿ ಆಘಾತ ಸಂಭವಿಸುವ ಸಾಧ್ಯತೆ ಹೆಚ್ಚು. ಈ ಆತಂಕ ತಪ್ಪಿಸಲು ತೊಳ ಹುಣಸೆ ಗ್ರಾಮ (ದಾವಣಗೆರೆ ಜಿಲ್ಲೆ/ ತಾಲ್ಲೂಕು) ದಲ್ಲಿ ಬೆಡ್‌ಸ್ವಿಚ್‌ಗೆ ನೀರಿನ ಖಾಲಿ ಬಾಟಲ್ ಅಳವಡಿಸಿದ್ದಾರೆ.

ವಿದ್ಯುತ್ ಕಂಬದ ಮೇಲ್ಭಾಗದಿಂದ ಬಂದ ವಿದ್ಯುತ್ ವೈರ್ ಅನ್ನು ಬಾಟಲ್ ಬಾಯಿ ಮೂಲಕ ಒಳಕ್ಕೆ ಹಾಕಲಾಗಿದೆ. ಸ್ವಿಚ್ ಆನ್/ ಆಫ್ ಮಾಡಲು ಬಾಟಲ್ ಬುಡವನ್ನು ಕತ್ತರಿಸಲಾಗಿದೆ. ಮೇಲ್ಭಾಗದಲ್ಲಿ ಮಳೆ ನೀರು ಸ್ವಿಚ್‌ಗೆ ತಾಗದಂತೆ ಟೇಪ್ ಹಚ್ಚಿದ್ದಾರೆ. ಹೇಗಿದೆ ಇಲ್ಲಿರುವ ವಿದ್ಯುತ್ ಸೇಫ್ಟಿ ಸ್ವಿಚ್!

**-ರಘುನಾಥರಾವ್ ತಾಪ್ಸೆ, ದಾವಣಗೆರೆ**

